ಸೋಮವಾರದ ದಿನ ನಾನೇ ತಮಗೆ ಉತ್ತರ ಕೊಡಿಸುತ್ತೇನೆ. ದಯಮಾಡಿ ಸಹಕಾರ ಮಾಡಿ. ನಿಮ್ಮ ಮನಸ್ಸು ತುಂಬುವಂತೆ ನಾನು ಉತ್ತರ ಕೊಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಒಂದು ನಿಮಿಷ.

ಉಪಾಧ್ಯಕ್ಷರು : ಬೇಡ, ನಾನು ತಮಗೆ ಕೈ ಮುಗಿದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ಕೈ ಮುಗಿದರೆ ನಾನು ಸಾಷ್ಟಾಂಗ ನಮಸ್ಕಾರ ಮಾಡಿಬಿಟ್ಟೆ.

ಉಪಾಧ್ಯಕ್ಷರು : ಮತ್ತೆ ನಾನು ತಮಗೆ ಯಾವ ರೀತಿ ಹೇಳುವುದು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ನಮ್ಮ ಕ್ಷೇತ್ರದ ಬಗ್ಗೆ ಸಂಪೂರ್ಣವಾಗಿ ಗೊತ್ತಿರತಕ್ಕಂಥ ಮಾನ್ಯ ಉಪಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಇದ್ದಾರೆ ಅವರೇ ಹೇಳಲಿ ಸ್ವಾಮಿ.

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಬೇಕು. ಸೋಮವಾರ ಉತ್ತರ ಕೊಡಿಸುತ್ತೇನೆ.

ಚಾಮರಾಜನಗರದ ಹೊಂಗನೂರು ಗ್ರಾಮದ ಟ್ಯಾಂಕ್ ಬಗ್ಗೆ ಪ್ರಸ್ತಾಪ

ಶ್ರೀ ಎ.ಆರ್. ಕೃಷ್ಣಮೂರ್ತಿ : ಮಾನ್ಯ ಉಪಾಧ್ಯಕ್ಷರೇ ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ಹೊಂಗನೂರು ಗ್ರಾಮದಲ್ಲಿರತಕ್ಕಂಥಾ ಹಿರೇಕೆರೆ ಟ್ಯಾಂಕ್‌ಗೆ ಕೆರೆಯ ಜಲಾಶಯ ಪ್ರದೇಶದಲ್ಲಿ ಬರುವ ಬೆಲ್ಲತ್ತ ಜಲಾಶಯವನ್ನು ನಿರ್ಮಿಸುವುದಕ್ಕಿಂತ ಮುಂಚೆ ಕೆರೆಗೆ ಬಹಳಷ್ಟು ನೀರು ಶೇಖರಣೆ ಆಗುತ್ತಿತ್ತು. ಸುಮಾರು ಎರಡು ಸಾವಿರ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಒದಗುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಕೆರೆಯು ಸರಿಯಾಗಿ ಅಭಿವೃದ್ಧಿ ಹೊಂದದೇ ಮತ್ತು ಈ ಒಂದು ಅಚ್ಚುಕಟ್ಟು ಪ್ರದೇಶದಲ್ಲಿ ನೀರು ಸರಿಯಾಗಿ ಶೇಖರಣೆ ಆಗದೇ ಸುಮಾರು ಎರಡು ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ತೊಂದರೆ ಆಗಿದೆ ಆದ್ದರಿಂದ ನಾನು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈ ಒಂದು ಹೊಂಗನೂರು ಗ್ರಾಮದ ಹಿರೇಕೆರೆ ಎಂಬ ಕೆರೆಗೆ ಏತನೀರಾವರಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಸರ್ಕಾರದ ಮುಂದೆ ಈ ಒಂದು ಏತನೀರಾವರಿ ಯೋಜನೆ ಇದ್ದರೆ ಅದರ ಅಂದಾಜು ವೆಚ್ಚ ಎಷ್ಟು? ಮತ್ತು ಆ ಯೋಜನೆಯನ್ನು ಜರೂರಾಗಿ ಮುಗಿಸಿಕೊಡುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೇ ಚಾಮರಾಜನಗರ ತಾಲ್ಲೂಕು ಹೊಂಗನೂರು ಗ್ರಾಮದಲ್ಲಿ ಹಿರೇಕೆರೆ ಟ್ಯಾಂಕ್ ಎಂದು ಒಂದು ಇದೆ. ಅಲ್ಲಿ ಸುಮಾರು ಎರಡು ಸಾವಿರ ಎಕರೆ ಪ್ರದೇಶ ಅಚ್ಚುಕಟ್ಟು ಇತ್ತು. ಮೇಲೆ ಒಂದು ಟ್ಯಾಂಕ್ ಮಾಡಿದ್ದರಿಂದ ಹಾಲಿ ಅಚ್ಚುಕಟ್ಟಿಗೆ ತೊಂದರೆ ಆಗಿದೆ ಎನ್ನುವಂತಹ ಒಂದು ವಿಚಾರ ಇದೆ. 1997ರಲ್ಲಿ ಅದಕ್ಕೆ ಒಂದು ಸರ್ವೇ ನಡೆದಿದೆ. ತನಿಖಾ ಕಾರ್ಯಕ್ರಮ ಎಲ್ಲಾ ಮಾಡುತ್ತಿದ್ದಾರೆ. ಸುಮಾರು ಒಂದೂವರೆ ಕೋಟಿ ರೂಪಾಯಿಗಳಿಂದ ಕಬಿನಿ ಬಲದಂಡೆ ನಾಲೆಯಿಂದ 148ನೇ ಕಿಲೋಮೀಟರ್‌ನಲ್ಲಿ ಹಣ ಮಂಜೂರು ಮಾಡಿ ಈ ಕಾಮಗಾರಿಯನ್ನು ಈ ವರ್ಷ ಪ್ರಾರಂಭಿಸಲು ಪ್ರಯತ್ನ ಮಾಡುತ್ತೇವೆ.